| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಜಮಖಂಡಿ | |
|---|---|
| | ಸಿ.ಸಿ.ನಂ. – 1/2021 |
| | ಚಾ.ಸಾ – 3 |
| | ಪ್ರಾ.ಸಾ – 1 |
| ಸಾಕ್ಷಿದಾರರ ಹೆಸರು | ಅಮರೇಶ ಪಲ್ಲೇದ |
| ತಂದೆಯ ಹೆಸರು | ಗಜಾನನ |
| ವಯಸ್ಸು | 32 ವರ್ಷ |
| ಉದ್ಯೋಗ | ಪ್ರ.ದ.ಸ, ಬಿ.ಓ ಆಫೀಸ್ ಜಮಖಂಡಿ |
| ವಾಸಸ್ಥಳ | ಜಮಖಂಡಿ |

ಇಂದು ದಿನಾಂಕ 30-12-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಸ.ಸ.ಅ ರವರಿಂದ**

1. ದಿ:15.03.2018 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಜಮಖಂಡಿಯಲ್ಲಿ ಪಂಚರು ಎಂದು ನಮ್ಮನ್ನು ಕರೆದಿದ್ದರು. ಆ ಸಮಯದಲ್ಲಿ ಚಾಸಾ-2, ಚಾಸಾ-1 ರವರು ಹಾಜರ ಇದ್ದರು. ಪೊಲೀಸರು ಸ್ಥಳದಲ್ಲಿ ಮಹಜರ ಮಾಡಿದ್ದಾರೆ. ಆರೋಪಿ ಚಾಸಾ-1 ರವರ ಎದುರಿಗಿನ ಕುರ್ಚಿಯಲ್ಲಿ ಕುಳಿತು ಕೆಲಸ ಮಾಡುವಾಗ ಹಣವನ್ನು ದುರ್ಬಳಕೆ ಮಾಡಿದ್ದಾರೆ ಎಂದು ಚಾಸಾ-1 ನನಗೆ ಹೇಳಿದ್ದಾರೆ. ಅದಕ್ಕೆ ಆರೋಪಿ-1 ರವರು ಕುಳಿತು ಕೆಲಸ ಮಾಡುವ ಜಾಗೆಯಲ್ಲಿ ಮಹಜರ ಮಾಡಿದ್ದಾರೆ. ಮಹಜರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಆರೋಪಿ ಹಾಜರ ಇದ್ದು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೆ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಪ್ರಭಾರ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ ಜಮಖಂಡಿ.

| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಜಮಖಂಡಿ | |
|---|---|
| | ಸಿ.ಸಿ.ನಂ. – 1/2021 |
| | ಚಾ.ಸಾ – 2 |
| | ಪ್ರಾ.ಸಾ – 2 |
| ಸಾಕ್ಷಿದಾರರ ಹೆಸರು | ಶಿವನಗೌಡ ಬಿರಾದಾರ |
| ತಂದೆಯ ಹೆಸರು | ಬಸನಗೌಡ |
| ವಯಸ್ಸು | 42 ವರ್ಷ |
| ಉದ್ಯೋಗ | ದ್ವಿ.ದ.ಸ, ಬಿ.ಒ ಆಫೀಸ್ ಜಮಖಂಡಿ |
| ವಾಸಸ್ಥಳ | ಮುಧೋಳ |

ಇಂದು ದಿನಾಂಕ 30–12–2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಸ.ಸ.ಅ ರವರಿಂದ**

1. ದಿ:15.03.2018 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಜಮಖಂಡಿಯಲ್ಲಿ ಪಂಚರು ಎಂದು ನಮ್ಮನ್ನು ಕರೆದಿದ್ದರು. ಆಗ ಸಮಯ 10 ರಿಂದ 11 ಆಗಿತ್ತು. ಆ ಸಮಯದಲ್ಲಿ ಚಾಸಾ–1, ಚಾಸಾ–3 ರವರು ಹಾಜರ ಇದ್ದರು. ಪೊಲೀಸರು ಸ್ಥಳದಲ್ಲಿ ಮಹಜರ ಮಾಡಿದ್ದಾರೆ. ಸದರಿ ಗುನ್ನಾ ಜಾಗೆಯ ಬಾಗಿಲು ಪೂರ್ವಕ್ಕೆ ಮುಖ ಮಾಡಿ ಇದ್ದು ಕಟ್ಟಡ ಆಯತ್ ಆಕಾರದಲ್ಲಿ ಇತ್ತು. ಆರೋಪಿ ನೈರುತ್ಯ ದಿಕ್ಕಿನಲ್ಲಿ ಕುಳಿತುಕೊಳ್ಳುತ್ತಿದ್ದನು. ಸದರಿ ಸ್ಥಳದಲ್ಲಿ ಪೊಲೀಸರು ಮಹಜರ ಮಾಡಿದ್ದಾರೆ. ಆರೋಪಿ ಹಣ ದುರ್ಬಳಕೆ ಮಾಡಿ ಬೇರೆ ಬೇರೆ ಖಾತೆಗೆ ಜಮೆ ಮಾಡಿದ್ದನು. ಅದಕ್ಕೆ ಸಂಬಂಧಪಟ್ಟಂತೆ ಪೊಲೀಸರು ಸ್ಥಳದಲ್ಲಿ ಮಹಜರ ಮಾಡಿದ್ದಾರೆ. ಅದಕ್ಕೆ ನಾನು ಸಹಿ ಹಾಕಿದ್ದೇನೆ. ಮಹಜರನ್ನು ಈಗಾಗಲೇ ನಿಪಿ–1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–1(ಬಿ) ಎಂದು ಗುರುತಿಸಲಾಯಿತು.

ಆರೋಪಿ ಹಾಜರ ಇದ್ದು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೆ. ಸರಿ ಅದೆ.

ಸಹಿ/–

ಸಾಕ್ಷಿಯ ಸಹಿ

ಪ್ರಭಾರ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ ಜಮಖಂಡಿ.